ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೨**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೊಂಬತ್ತನೇ ಅಧಿವೇಶನ**

**ಮಂಗಳವಾರ, ದಿನಾಂಕ: ೧೪ನೇ ಜುಲೈ, ೨೦೧೫**

---

**ಸಮೂಹ – II**

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

## ಸಿಮೆಂಟ್ ರಸ್ತೆಗಳ ಅವೈಜ್ಞಾನಿಕ ಕಾಮಗಾರಿ ಕುರಿತು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೬೬ (೧೬೭೦) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಾರವಾರ ಜಿಲ್ಲೆ, ಹಳಿಯಾಳ ತಾಲ್ಲೂಕಿನ ಆಲೂರು ಗ್ರಾಮದಿಂದ ದಾಂಡೇಲಿಯವರೆಗೆ ಸಿಮೆಂಟ್ ರಸ್ತೆ ಸಮರ್ಪಕವಾಗಿ ಅಗಲೀಕರಣಗೊಳ್ಳದೆ ಅವೈಜ್ಞಾನಿಕವಾಗಿ ಕಾಮಗಾರಿ ಕೈಗೊಂಡ ಪ್ರಯುಕ್ತ ವಾಹನಗಳು ನಿಯಂತ್ರಣ ತಪ್ಪಿ ಉರುಳಿಬಿದ್ದು ಅಪಘಾತಗಳು ಸಂಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ಈಗಾಗಲೇ ಸದರಿ ಸಿಮೆಂಟ್ ರಸ್ತೆ ಕಾಮಗಾರಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ; ಇದನ್ನು ಸಮರ್ಪಕವಾಗಿ ಉಪಯೋಗ ಮಾಡದೇ ಸಂಬಂಧಿಸಿದ ಅಧಿಕಾರಿಗಳು ದುರುಪಯೋಗ ಮಾಡಿರುತ್ತಾರೆಂದು ಅಲ್ಲಿಯ ಸಾರ್ವಜನಿಕರು ಬೃಹತ್ ಪ್ರತಿಭಟನೆ ಮಾಡುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ;

(ಇ) ಹಾಗಿದ್ದಲ್ಲಿ, ಈ ರೀತಿ ಅವೈಜ್ಞಾನಿಕವಾಗಿ ಮಾಡಿರುವ ಕಾಮಗಾರಿಗಳಿಗೆ ಯಾರು ಹೊಣೆಗಾರರು ; ಇದಕ್ಕೆ ಸಂಬಂಧಿಸಿದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ರೈತರಿಗೆ ಸಾಲ ಮಂಜೂರಾತಿ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬೭ (೧೩೦೮) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೨ ವರ್ಷದ ಅವಧಿಯಲ್ಲಿ ಎಷ್ಟು ರೈತರಿಗೆ ಸಾಲ ಮಂಜೂರು ಮಾಡಲಾಗಿದೆ ;

(ಆ) ಎಷ್ಟು ಮೊತ್ತದ ಸಾಲವನ್ನು ಮಂಜೂರು ಮಾಡಲಾಗಿದೆ ; ಎಷ್ಟು ಮೊತ್ತ ವಿತರಿಸಲಾಗಿದೆ ;

(ಇ) ಇವರುಗಳ ಪೈಕಿ ಎಷ್ಟು ರೈತರು ಸಾಲವನ್ನು ಮರುಪಾವತಿ ಮಾಡಿರುತ್ತಾರೆ ಮತ್ತು ಮೊತ್ತವೆಷ್ಟು ?

## ವಿದ್ಯುತ್ ಮಾಪಕಗಳ ದೋಷ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೧೬೮ (೧೬೬೯) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ವಿದ್ಯುತ್ ಪ್ರಸರಣ ನಿಗಮಗಳೆಷ್ಟು ; ಎಷ್ಟು ವಿದ್ಯುತ್ ಮಾಪಕಗಳನ್ನು (Electric Meter) ಖರೀದಿಸಲಾಗಿದೆ ; (ಕಳೆದ ೨ ವರ್ಷದ ನಿಗಮವಾರು ಮಾಹಿತಿ ನೀಡುವುದು)

(ಆ) ಪ್ರತಿ ವಿದ್ಯುತ್ ಮಾಪಕಗಳ ದರವೆಷ್ಟು ; ಪ್ರತಿ ನಿಗಮಗಳು ಈ ಖರೀದಿಗಾಗಿ ಪಾವತಿಸಿದ ಹಣವೆಷ್ಟು ; (ನಿಗಮವಾರು ವಿವರ ನೀಡುವುದು)

(ಇ) ಸರಬರಾಜು ಪಡೆದಿರುವ ವಿದ್ಯುತ್ ಮಾಪಕಗಳ ಉತ್ಪಾದನಾ ಕಂಪನಿಗಳು ಮತ್ತು ಸರಬರಾಜುದಾರರು ಯಾರು ; (ವಿವರ ನೀಡುವುದು)

(ಈ) ಗುಜರಾತ್ ಸರ್ಕಾರ ಕಪ್ಪುಪಟ್ಟಿಗೆ ಸೇರಿಸಲ್ಪಟ್ಟ ಅಥವಾ ತಿರಸ್ಕರಿಸಲ್ಪಟ್ಟ ಕಂಪನಿಗಳು ಉತ್ಪಾದಿಸಿದ ಮಾಪಕಗಳನ್ನು ಈ ವಿದ್ಯುತ್ ನಿಗಮಗಳು ಪಡೆದಿದೆಯೇ ; ಪರಿಶೀಲನೆಗಳನ್ನು ಮಾಡಲಾಗಿದೆಯೇ ; (ವಿವರಗಳನ್ನು ನೀಡುವುದು)

(ಉ) ಈ ಮೀಟರ್ ಮಾಪಕದ ದೋಷದಿಂದ ದಿಢೀರ್ ಆಗಿ ವಿದ್ಯುತ್ ಬಿಲ್ಲುಗಳು ಏರಿಕೆಯಾಗಿ ಬಾಕಿದಾರರು ತೊಂದರೆಗೆ ಸಿಲುಕಿ ನಿಗಮಗಳಿಗೆ ದೂರುಗಳನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ದೂರುಗಳ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ? (ಕಳೆದ ೨ ವರ್ಷದ ವಿವರ ನೀಡುವುದು)

## ಕೃಷಿ ವಿಶ್ವವಿದ್ಯಾಲಯಗಳ ನೌಕರರು ಕರ್ತವ್ಯದ ಅವಧಿಯಲ್ಲಿ ಕ್ಯಾಂಪಸ್‌ಗಳಲ್ಲಿಯೇ ಆತ್ಮಹತ್ಯೆ ಮಾಡಿಕೊಳ್ಳತ್ತಿರುವ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೬೯ (೧೬೫೩) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಒಂದು ವರ್ಷದ ಅವಧಿಯಲ್ಲಿ ರಾಜ್ಯದ ಕೃಷಿ ವಿಶ್ವವಿದ್ಯಾಲಯದ ನೌಕರರು ಕರ್ತವ್ಯ ನಿರ್ವಹಿಸುತ್ತಿರುವ ಕ್ಯಾಂಪಸ್‌ನಲ್ಲಿಯೇ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣಗಳು ಸರಕಾರದ ಗಮನಕ್ಕೆ ಬಂದಿವೆಯೇ ;

(ಆ) ಬಂದಿದ್ದಲ್ಲಿ, ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಎಷ್ಟು ; ಇಂತಹ ಪ್ರಕರಣಗಳು ಯಾವ ಯಾವ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ನಡೆದಿವೆ ;

(ಇ) ನೌಕರರು ಆತ್ಮಹತ್ಯೆಗೆ ಶರಣಾಗಲು ಕಾರಣಗಳೇನು ಎಂಬ ಮಾಹಿತಿಯನ್ನು ಸಂಗ್ರಹಿಸಲಾಗಿದೆಯೇ ;

(ಈ) ಈ ಅತ್ಮಹತ್ಯೆ ಪ್ರಕರಣಗಳ ಕುರಿತು ತನಿಖೆ ನಡೆಸಲಾಗಿದೆಯೇ ; ನಡೆಸಿದ್ದಲ್ಲಿ, ತನಿಖೆ ಯಾವ ಹಂತದಲ್ಲಿದೆ ? (ಪ್ರಕರಣವಾರು ವಿವರ ನೀಡುವುದು)

## ಕೃಷಿ ಮಾರುಕಟ್ಟೆ ಮಳಿಗೆಗಳ ಹಂಚಿಕೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೦ (೧೬೭೧) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಕೃಷಿ ಮಾರುಕಟ್ಟೆಗಳು ಎಷ್ಟು ; ರೈತರಿಗೆ ಈ ಮಾರುಕಟ್ಟೆಗಳಿಂದ ಒದಗಿಸಲಾದ ಸೌಲಭ್ಯಗಳು ಯಾವುವು ;

(ಆ) ಈ ಇಲಾಖೆಯಿಂದ ರೈತರ ಅನುಕೂಲಕ್ಕಾಗಿ ಎಲ್ಲೆಲ್ಲಿ ಎಷ್ಟೆಷ್ಟು ವ್ಯಾಪರ ಮಳಿಗೆಗಳನ್ನು ಕಟ್ಟಿಸಲಾಗಿದೆ ;

(ಇ) ಈ ಮಳಿಗೆಗಳನ್ನು ಯಾರ್ಯಾರಿಗೆ ಎಷ್ಟೆಷ್ಟು ಬಾಡಿಗೆಗೆ ನೀಡಲಾಗಿದೆ ; (ಜಿಲ್ಲಾವಾರು, ನಗರವಾರು ಮಾಹಿತಿ ನೀಡುವುದು)

(ಈ) ಹಂಚಿಕೆಯಾಗಿರುವ ಮಾರುಕಟ್ಟೆ ಮಳಿಗೆಗಳನ್ನು ನೀಡುವಾಗ ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡದವರಿಗೆ ಮೀಸಲಾತಿ ನೀಡಿ ಹಂಚಲಾಗಿದೆಯೇ ;

(ಉ) ಹಾಗಿದ್ದಲ್ಲಿ, ಯಾವ ಯಾವ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಯಾವ ಯಾವ ಮಳಿಗೆಗಳನ್ನು ಎಷ್ಟು ಬಾಡಿಗೆಗೆ ನೀಡಲಾಗಿದೆ ? (ಸ್ಥಳವಾರು ವಿವರ ನೀಡುವುದು)

## ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸುತ್ತಿರುವ ಕುರಿತು

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೭೧ (೧೨೮೬) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸುತ್ತಿರುವುದು ನಿಜವೇ ; ನಿಜವಾಗಿದ್ದಲ್ಲಿ, ಸರ್ಕಾರವು ನೀಡುವ ರಿಯಾಯಿತಿ ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ರೈತರಿಗೆ ಬೀಜ ಖರೀದಿಸುವಲ್ಲಿ ಆರ್ಥಿಕ ಹೊರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ರೈತರಿಗೆ ಯಾವ ಯಾವ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ ;

(ಇ) ಅವುಗಳಿಗೆ ಕೇಂದ್ರ ಸರ್ಕಾರವು ನಿಗದಿಪಡಿಸಿದ ರಿಯಾಯಿತಿ ದರವೆಷ್ಟು ; ಸರ್ಕಾರವು ನಿಗದಿಪಡಿಸಿದ ರಿಯಾಯಿತಿ ದರವೆಷ್ಟು ;

(ಈ) ಬಿತ್ತನೆ ಬೀಜದ ರಿಯಾಯಿತಿಯನ್ನು ಹೆಚ್ಚಿಸಿ ರೈತರಿಗೆ ಅನುಕೂಲ ಕಲ್ಪಿಸುವ ವಿಚಾರ ಸರ್ಕಾರದ ಮುಂದಿದೆಯೇ ?

## ಲಾಲ್‌ಬಾಗ್‌ನಲ್ಲಿರುವ ಐತಿಹಾಸಿಕ ಕಟ್ಟಡಗಳ ನವೀಕರಣ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೨ (೧೨೮೪) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರದ ಪ್ರಮುಖ ಉದ್ಯಾನವನದಲ್ಲಿ ಒಂದಾದ ಲಾಲ್‌ಬಾಗ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ (ಗುತ್ತಿಗೆ ನೌಕರರನ್ನು ಒಳಗೊಂಡು) ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಲಾಲ್‌ಬಾಗ್‌ನ ವಾರ್ಷಿಕ ಆದಾಯ ಮತ್ತು ವೆಚ್ಚ ಎಷ್ಟು ; ಸರ್ಕಾರ ನೀಡುವ ಅನುದಾನವೆಷ್ಟು ; (ವಿವರ ನೀಡುವುದು)

(ಇ) ಲಾಲ್‌ಬಾಗ್‌ನಲ್ಲಿರುವ ಐತಿಹಾಸಿಕ ಕಟ್ಟಡಗಳೆಷ್ಟು ; (ಹೆಸರಿನೊಂದಿಗೆ ವಿವರ ನೀಡುವುದು) ಇವುಗಳನ್ನು ನವೀಕರಿಸಲಾಗಿದೆಯೇ ; ಇಲ್ಲವಾದಲ್ಲಿ, ಕಾರಣವೇನು ;

(ಈ) ಲಾಲ್‌ಬಾಗ್‌ನ ಒಳಆವರಣದಲ್ಲಿ ಅನಧಿಕೃತವಾಗಿ ವಾಹನಗಳು ಪ್ರವೇಶ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇವುಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಮಂಡ್ಯನಗರ ತರಕಾರಿ ಮಾರುಕಟ್ಟೆಯ ಅಭಿವೃದ್ಧಿ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೭೩ (೧೨೮೭) ಕೃಷಿ ಮಾರುಕಟ್ಟೆ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಪಟ್ಟಣದ ತರಕಾರಿ ಮಾರುಕಟ್ಟೆಯ ಕಟ್ಟಡ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಾರುಕಟ್ಟೆಯ ಪ್ರಾಂಗಣದಲ್ಲಿ ಕೊಳೆತ ತರಕಾರಿ ಸೊಪ್ಪುಗಳ ರಾಶಿಯಿಂದ ಪರಿಸರ ಮಾಲಿನ್ಯಗೊಂಡಿರುವುದು ಮತ್ತು ಗ್ರಾಹಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಮಾರುಕಟ್ಟೆಯನ್ನು ಶುದ್ಧೀಕರಿಸಲು, ದುರಸ್ಥಿಪಡಿಸಲು ಅಥವಾ ಹೊಸ ಮಾರುಕಟ್ಟೆಯನ್ನು ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಬೆಳೆ ವಿಮೆ

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೧೭೪ (೧೬೭೭) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳೆ ವಿಮೆಯ ಆಶಯಗಳೇನು ; ರಾಜ್ಯದಲ್ಲಿ ಯಾವ ಯಾವ ಬೆಳೆಗೆ ವಿಮೆ ಅವಕಾಶವಿದೆ ; ಯಾವ ಯಾವ ಬೆಳೆಗೆ ಅವಕಾಶವಿರುವುದಿಲ್ಲ ; ಈ ಬೆಳೆ ವಿಮೆ ಯಾವ ಅವಧಿಯಿಂದ ಇದೆ ;

(ಆ) ರಾಜ್ಯದಲ್ಲಿನ ರೈತರ ಪೈಕಿ ಎಷ್ಟು ರೈತರು ಬೆಳೆ ವಿಮೆ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ ; ಎಷ್ಟು ರೈತರು ವಿಮೆ ಸೌಲಭ್ಯ ಪಡೆಯುತ್ತಿಲ್ಲ ; (ಶೇಕಡವಾರು ವಿವರ ನೀಡುವುದು)

(ಇ) ರೈತರ ಬೆಳೆಗೆ ಯೋಗ್ಯ ಬೆಲೆ ಸಿಗದಿದ್ದಾಗ ಮತ್ತು ಪ್ರಕೃತಿ ವಿಕೋಪಗಳಿಂದ ನಷ್ಟ ಉಂಟಾದಾಗ, ಬೆಳೆಗಾಗಿ ಮಾಡಿದ ಸಾಲಬಾದೆ ಜಾಸ್ತಿಯಾದಾಗ, ಈ ಬೆಳೆ ವಿಮೆ ಬಗ್ಗೆ ಕೃಷಿ ಇಲಾಖೆ ಹೆಚ್ಚಿನ ಪ್ರಚಾರ ಮಾಡಿ, ಹೆಚ್ಚಿನ ರೈತರನ್ನು ಬೆಳೆ ವಿಮೆ ವ್ಯಾಪ್ತಿಗೆ ಒಳಪಡಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ;

(ಈ) ರಾಜ್ಯದಲ್ಲಿನ ಎಲ್ಲಾ ರೈತರು ಈ ಬೆಳೆ ವಿಮೆ ಸೌಲಭ್ಯಗಳನ್ನು ನಿರಂತರವಾಗಿ ಪಡೆಯಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

## ಮಂಡ್ಯ ಜಿಲ್ಲೆ ಮೈಶುಗರ್ ಕಂಪನಿಯಲ್ಲಿ ಕಬ್ಬು ಹರೆಯುವಿಕೆ

**ಶ್ರೀ ಅಶ್ವತ್ ನಾಯಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೫ (೧೨೯೯) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆ ಮೈಶುಗರ್ ಸಕ್ಕರೆ ಕಂಪನಿಯ ದಿನನಿತ್ಯದ ಕಬ್ಬು ಹರೆಯುವಿಕೆಯ (Crushing Capacity) ಪ್ರಮಾಣ ಎಷ್ಟು ;

(ಆ) ಮೈಶುಗರ್ ಕಂಪನಿಯಲ್ಲಿ ಈಗಾಗಲೇ ಕೋ–ಜನರೇಷನ್ ವಿದ್ಯುತ್ ಉತ್ಪಾದನೆಗೆ ಬಿಡುಗಡೆ ಮಾಡಿದ ಹಣವೆಷ್ಟು ; ವಿದ್ಯುತ್ ಉತ್ಪಾದನೆ ಮಾಡದಿರಲು ಕಾರಣವೇನು ;

(ಇ) ಸರ್ಕಾರ ವಿದ್ಯುತ್ ಉತ್ಪಾದನೆ ಕೋ–ಜನರೇಷನ್‌ಗಾಗಿ ಮತ್ತೆ ಹಣ ಬಿಡುಗಡೆ ಮಾಡಿರುವುದೇ ; ಇದ್ದಲ್ಲಿ, ಎಷ್ಟು ಬಿಡುಗಡೆ ಮಾಡಲಾಗಿದೆ ; ಯಾವಾಗ ಬಿಡುಗಡೆ ಮಾಡಲಾಗಿದೆ ;

(ಈ) ಬಿಡುಗಡೆ ಮಾಡಿರುವ ಹಣ ಸಾಲದ ರೂಪದಲ್ಲಿದೆಯೇ ; ಅಥವಾ ಕಂಪನಿ ಅಭಿವೃದ್ಧಿಗಾಗಿ ನೀಡಿರುವುದೇ ? (ವಿವರ ನೀಡುವುದು)

## ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಪಾವತಿಸಬೇಕಾದ ಬಾಕಿ ಹಣ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ)** --

೧೭೬ (೧೬೪೭) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೩–೧೪ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ನೀಡಿರುವ ಕಬ್ಬಿನ ಬಾಕಿ ಹಣವನ್ನು ರೈತರಿಗೆ ನೀಡುವ ವ್ಯವಸ್ಥೆ ಕಲ್ಪಿಸಲು ಸರ್ಕಾರ ಮುಂದಾಗಿದೆಯೇ; ಇದರ ಮೊತ್ತವೆಷ್ಟು ; ಇದನ್ನು ಯಾವ ಬಾಬ್ತಿನ ಹಣದಿಂದ ಪಾವತಿಸಲಾಗುವುದು ; ಪಾವತಿಸಲು ಬೇಕಾಗುವ ಕಾಲಾವಧಿ ಎಷ್ಟು ; (ವಿವರ ನೀಡುವುದು)

(ಆ) ೨೦೧೪–೧೫ ಹಾಗೂ ೨೦೧೫–೧೬ ರಲ್ಲಿ ರೈತರಿಗೆ ಸಕ್ಕರೆ ಕಾರ್ಖಾನೆಗಳಿಂದ ಬರಬೇಕಾದ ಬಾಕಿ ಮೊತ್ತವೆಷ್ಟು ; ಸದರಿ ಮೊತ್ತವನ್ನು ರೈತರಿಗೆ ಪಾವತಿಸುವಂತೆ ಮಾಡಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು ?

## ಬೀದರ್ ಜಿಲ್ಲೆಯ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಿದ ಆಸ್ತಿ ತೆರಿಗೆ

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)–**

೧೭೭ (೧೨೮೮) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ೨೦೧೨–೧೩ ರಿಂದ ೨೦೧೪–೧೫ನೇ ಸಾಲಿನ ಮಾರ್ಚ್‌ವರೆಗೆ ಎಷ್ಟು ಆಸ್ತಿ ತೆರಿಗೆ ಸಂಗ್ರಹಿಸಲಾಗಿದೆ ; (ವಿವರ ನೀಡುವುದು)

(ಆ) ಸಂಗ್ರಹವಾದಲ್ಲಿ ಆಸ್ತಿ ತೆರಿಗೆ (ಅಂಗಡಿಗಳ ಬಾಡಿಗೆ ವಸೂಲಿ) ಹರಾಜು ಮತ್ತು ಕಂದಾಯ ತೆರಿಗೆ ವಸೂಲಿ ಎಷ್ಟು ; ಸ್ಥಳೀಯ ಸಂಸ್ಥೆಗಳವಾರು ಸಂಗ್ರಹಿಸಿದ ಹಣವೆಷ್ಟು ;

(ಇ) ವಸೂಲಾತಿ ಮಾಡಿದ್ದಲ್ಲಿ ಸಂಗ್ರಹವಾದ ಮೊತ್ತ ಎಷ್ಟು ; (ವರ್ಷವಾರು, ಸಂಸ್ಥೆಗಳವಾರು ಮಾಹಿತಿ ನೀಡುವುದು)

(ಈ) ಆಸ್ತಿ ತೆರಿಗೆ ಕಟ್ಟದವರ ಸಂಖ್ಯೆ ಎಷ್ಟು ? (ಹೆಸರುವಾರು, ವಾರ್ಡ್‌ವಾರು ಮಾಹಿತಿ ಒದಗಿಸುವುದು)

## ಲೋಕೋಪಯೋಗಿ ಇಲಾಖೆಗೆ ಬಿಡುಗಡೆಯಾಗುತ್ತಿರುವ ಅನುದಾನದ ಮೊತ್ತ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೭೮ (೧೩೦೯) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೩ ವರ್ಷಗಳಲ್ಲಿ ರಾಮನಗರ ಜಿಲ್ಲೆಯ ಲೋಕೋಪಯೋಗಿ ಇಲಾಖೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು; ಖರ್ಚು ಮಾಡಲಾದ ಮೊತ್ತವೆಷ್ಟು ; ಖರ್ಚಾಗದೆ ಉಳಿದ ಮೊತ್ತವೆಷ್ಟು ; (ವರ್ಷವಾರು, ಲೆಕ್ಕಶೀರ್ಷಿಕೆವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಅನುದಾನದಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳು ಯಾವುವು ; ಈ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ ; (ಲೆಕ್ಕಶೀರ್ಷಿಕೆವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆಯೇ ; ಟೆಂಡರ್ ಪ್ರಕ್ರಿಯೆ ನಡೆಸುವಾಗ ಅನುಸರಿಸಲಾಗಿರುವ ಮಾನದಂಡಗಳೇನು ; (ವಿವರ ನೀಡುವುದು)

(ಈ) ಈ ಕಾಮಗಾರಿಗಳನ್ನು ಯಾವ ಸಂಸ್ಥೆ / ಗುತ್ತಿಗೆದಾರರಿಗೆ ನೀಡಲಾಗಿದೆ ; (ಸಂಸ್ಥೆ/ಗುತ್ತಿಗೆದಾರರ ಹೆಸರು, ವಿಳಾಸ ಸಹಿತ ಕಾಮಗಾರಿಗಳ ಪ್ರತ್ಯೇಕ ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಈ ಯೋಜನೆಗಳಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳಿಗೆ ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ ; ಹಾಗಿದ್ದಲ್ಲಿ, ಎಷ್ಟು ಕಾಲಮಿತಿ ನೀಡಲಾಗಿದೆ ? (ವಿವರ ನೀಡುವುದು)

## ಹೈಡಲ್ ಜಲಸಂಪನ್ಮೂಲ್ ವಿದ್ಯುತ್ ಉತ್ಪಾದನೆಗೆ ಪರವಾನಿಗೆ ನೀಡಿರುವ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೯ (೧೬೪೩) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಖಾಸಗಿ ಸಂಸ್ಥೆಯವರಿಗೆ ಹೈಡಲ್ (Hydle) ಜಲಸಂಪನ್ಮೂಲ ವಿದ್ಯುತ್ ಉತ್ಪಾದನೆಗೆ ಪರವಾನಿಗೆ ನೀಡಿರುವುದು ನಿಜವೇ ;

(ಆ) ಹಾಗಿದ್ದರೆ, ಎಷ್ಟು ಖಾಸಗಿ ಸಂಸ್ಥೆಗೆ ಪರವಾನಗಿ ನೀಡಲಾಗಿದೆ ; ಪರವಾನಗಿ ಪಡೆದವರ ಹೆಸರು ಸಹಿತ ವಿವರ ನೀಡುವುದು ;

(ಇ) ಸದರಿ ಸಂಸ್ಥೆಗಳ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಎಷ್ಟು ; ಸಂಸ್ಥೆವಾರು ವಿವರ ಒದಗಿಸುವುದು ?

## ಅಕ್ರಮವಾಗಿ ಸಾದಿಲ್ವಾರು ಖರೀದಿ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮೦ (೧೬೨೩) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಪೌರಾಡಳಿತ ಸಂಸ್ಥೆಗಳಲ್ಲಿ ಸಾದಿಲ್ವಾರು ಸಾಮಗ್ರಿಗಳನ್ನು ಖರೀದಿಸುವ ಸಂಬಂಧ ಇರುವ ಮಾನದಂಡಗಳೇನು ; (ಪ್ರತಿ ಒದಗಿಸುವುದು)

(ಆ) ಸಾದಿಲ್ವಾರು–ಲೇಖನ ಸಾಮಗ್ರಿಗಳ ಖರೀದಿ ಸಂಬಂಧ ಯಾವುದಾದರೂ ಸಂಸ್ಥೆಗಳಿಗೆ ನಿಯಮಗಳಿಂದ ವಿನಾಯಿತಿ ನೀಡಲಾಗಿದೆಯೇ ; (ಹೊರಡಿಸಲಾಗಿರುವ ಆದೇಶ, ಸುತ್ತೋಲೆ, ಅಧಿಸೂಚನೆ ಪ್ರತಿ ಒದಗಿಸುವುದು)

(ಇ) ಕಳೆದ ೩ ವರ್ಷಗಳಲ್ಲಿ ನಗರ ಸಂಸ್ಥೆಗಳ ಖರೀದಿಯ ವಿವರ ಒದಗಿಸುವುದು; (ಖರೀದಿಸಿದ ವಸ್ತು, ಪ್ರಮಾಣ, ಮೊತ್ತ, ಸಂಸ್ಥೆಯ ಹೆಸರು, ಖರೀದಿ ವಿಧಾನ, ವರ್ಷವಾರು ವಿವರ ನೀಡುವುದು)

(ಈ) ಹಾವೇರಿ ಜಿಲ್ಲೆಯ ಹಿರೇಕೆರೂರು ಖಾಸಗಿ ಸಂಸ್ಥೆಯಿಂದ ರಾಜ್ಯದ ವಿವಿಧ ನಗರ ಸ್ಥಳೀಯ ಸಂಸ್ಥೆಗಳು ಅಕ್ರಮವಾಗಿ ಸ್ಟೇಷನರಿ ಸಾಮಗ್ರಿಗಳನ್ನು ಖರೀದಿಸಿರುವುದು ನಿಜವೇ ಹಾಗೂ ವಿವಿಧ ಸರಬರಾಜುದಾರರಿಂದ ಕಳೆದ ೩ ವರ್ಷದಲ್ಲಿ ಖರೀದಿಸಿರುವ ಸಾಮಗ್ರಿಗಳ ವಿವರ ಒದಗಿಸುವುದು ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸುವರ್ಣ ಸೌಧ, ಬೆಳಗಾವಿ, ಪಿ7, ಕಾ.ಸೂ. , ಪ್ರತಿಗಳು 1500